# ನಟನ ರಂಗಶಾಲೆ

(ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ)

## ರಂಗಭೂಮಿ ಡಿಪ್ಲೊಮಾ 2023–24 ಪ್ರವೇಶ ಅರ್ಜಿ

ಭಾವಚಿತ್ರ

**ಹೆಸರು:**

**ವಯಸ್ಸು:**

**ಲಿಂಗ:**

**ಹುಟ್ಟಿದ ದಿನಾಂಕ:**

**ಪೋಷಕರ ಹೆಸರು:**

**ವಿಳಾಸ:**

**ಮೊಬೈಲ್ ಸಂಖ್ಯೆ:**

**ವಿದ್ಯಾರ್ಹತೆ:**

**ಉದ್ಯೋಗ:**

**ರಂಗಕಲಿಕೆಯ ಉದ್ದೇಶ:**

**(ಪು.ತಿ.ನೋ)**

**ಸೂಚನೆ:**

- ನೇರ ಸಂದರ್ಶನದಲ್ಲಿ ಅಭ್ಯರ್ಥಿಯ ಪಾಲ್ಗೊಳ್ಳುವಿಕೆಯ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಸಂಸ್ಥೆಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ಆಯ್ಕೆಯಾದ ಅಭ್ಯರ್ಥಿಗಳು ಶೈಕ್ಷಣಿಕ ವರ್ಷದ ಕಲಿಕಾ ಶುಲ್ಕವನ್ನು ಎರಡು ಕಂತಿನಲ್ಲಿ ಕಟ್ಟಬಹುದಾಗಿದ್ದು, ಪೂರ್ಣ ಶುಲ್ಕವನ್ನು ಪಾವತಿಸದೆ ರಂಗಶಾಲೆಯನ್ನು ತೊರೆಯುವಂತಿಲ್ಲ. ಕಲಿಕಾ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
- ತರಬೇತಿಯ ಅವಧಿಯಲ್ಲಿ ಯಾವುದೆ ಸಿನಿಮಾ, ಧಾರಾವಾಹಿ, ಕಿರುಚಿತ್ರ, ಜಾಹೀರಾತು ಮುಂತಾದವುಗಳಲ್ಲಿ ತೊಡಗಿಕೊಳ್ಳುವಂತಿಲ್ಲ.
- ತರಬೇತಿಯ ಸಮಯದಲ್ಲಿ ಮೊಬೈಲ್ ಬಳಕೆ ನಿಷಿದ್ಧ.
- ರಂಗಭೂಮಿ ಮತ್ತು ಅಭಿನಯದ ತೀವ್ರತಮ ಪ್ರಾಯೋಗಿಕ ತರಬೇತಿಯಲ್ಲಿ ತೊಡಗಿಕೊಳ್ಳಲು ಅಗತ್ಯವಾದ ದೈಹಿಕ–ಮಾನಸಿಕ ಸಾಮರ್ಥ್ಯ, ಅತೀವ ಆಸಕ್ತಿ, ನಿರಂತರತೆ ಮತ್ತು ಬದ್ಧತೆ ಅತ್ಯಂತ ಅವಶ್ಯಕ.
- ರಂಗಶಾಲೆಯ ತರಬೇತಿಯ ಜೊತೆಗೆ ಸಂಸ್ಥೆಯ ಎಲ್ಲಾ ರಂಗ ಚಟುವಟಿಕೆಗಳಲ್ಲಿ, ವಿಚಾರ ಸಂಕಿರಣಗಳಲ್ಲಿ, ನೇಪಥ್ಯದ ಕೆಲಸಗಳಲ್ಲಿ, ಶ್ರಮದಾನ ಮತ್ತು ಸ್ವಚ್ಛತಾ ಕಾರ್ಯಗಳಲ್ಲಿ ತೊಡಗಿಕೊಳ್ಳುವುದು ಅಪೇಕ್ಷಣೀಯ.
- ತರಬೇತಿಯನ್ನು ಪೂರ್ಣಗೊಳಿಸಲು ಮೂರು ಅಭ್ಯಾಸಿ ಪ್ರಯೋಗಗಳಲ್ಲಿ ಪಾಲ್ಗೊಳ್ಳುವುದು ಮತ್ತು ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ನಡೆಯುವ ರಜಾ ಮಜಾ ಮಕ್ಕಳ ಬೇಸಿಗೆ ಶಿಬಿರದಲ್ಲಿ ಪೂರ್ಣಾವಧಿ ತೊಡಗಿಕೊಂಡು ಕಲಿಕೆಯ ಭಾಗವಾಗಿ ನಾಟಕವೊಂದನ್ನು ನಿರ್ದೇಶಿಸುವುದು, ಅಂತಿಮ ಪರೀಕ್ಷೆಯಲ್ಲಿ ಪಾಲ್ಗೊಳ್ಳುವುದು ಕಡ್ಡಾಯ.
- ಪ್ರವೇಶಾತಿ, ಹಾಜರಾತಿ, ಪರೀಕ್ಷೆ, ಮೌಲ್ಯಮಾಪನ, ಫಲಿತಾಂಶ ಮುಂತಾದ ಎಲ್ಲಾ ಶೈಕ್ಷಣಿಕ ಅಂಶಗಳು ವಿಶ್ವವಿದ್ಯಾನಿಲಯದ ನಿಯಮಗಳಿಗೆ ಬದ್ಧವಾಗಿದ್ದು, ಯಾವುದೇ ರೀತಿಯ ಸಡಿಲಿಕೆಯನ್ನು ನೀಡಲಾಗುವುದಿಲ್ಲ.
- ಅಂತಿಮ ಪರೀಕ್ಷೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ನಿಗದಿ ಪಡಿಸುವ ಪರೀಕ್ಷಾ ಶುಲ್ಕವನ್ನು ಅಭ್ಯರ್ಥಿಗಳೇ ಭರಿಸತಕ್ಕದ್ದು.
- ರಂಗಶಾಲೆಯ ಮತ್ತು ವಿಶ್ವವಿದ್ಯಾನಿಲಯದ ಎಲ್ಲಾ ನಿಯಮಗಳಿಗೂ ಬದ್ಧರಾಗಿರತಕ್ಕದ್ದು. ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು.

---

**ಮುಚ್ಚಳಿಕೆ:**

ನಾನು                                        , ಸ್ವ ಇಚ್ಛೆಯಿಂದಲೇ ಈ ರಂಗಭೂಮಿ ತರಬೇತಿಗೆ ಪ್ರವೇಶ ಪಡೆಯುತ್ತಿದ್ದು, ಭರ್ತಿ ಮಾಡಿದ ಎಲ್ಲಾ ಮಾಹಿತಿಗಳು ಸತ್ಯವಾದದ್ದು ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ. ಪ್ರಾಯೋಗಿಕ ಕಲಿಕೆಗೆ ಅಗತ್ಯವಾದ ದೈಹಿಕ, ಮಾನಸಿಕ ಸಾಮರ್ಥ್ಯವನ್ನು ನಾನು ಹೊಂದಿದ್ದು, ರಂಗಶಾಲೆಯ ಮತ್ತು ವಿಶ್ವವಿದ್ಯಾನಿಲಯದ ಎಲ್ಲಾ ನಿಯಮಗಳಿಗೂ ಬದ್ಧನಾಗಿರುತ್ತೇನೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

**ದಿನಾಂಕ:**

**(ಅಭ್ಯರ್ಥಿಯ ಸಹಿ)**